## ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಬರ 174/2018

ಸಿಡಬ್ಲ್ಯೂ-1 / ಪಿಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಹುಲ್ |
| ತಂದೆ ಹೆಸರು | ಃ | ಮಹೇಶ ನೀರಲಕೇರಿ |
| ವಯಸ್ಸು | ಃ | 26 ವರ್ಷ |
| ವೃತ್ತಿ | ಃ | ಖಾಸಗಿ ಕೆಲಸ |
| ವಾಸ್ತವ್ಯ | ಃ | ಸುಭಾಶನಗರ, ಹುಬ್ಬಳ್ಳಿ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 22-10-2024.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ 25-01-2018 ರಂದು ನಾನು ಮತ್ತು ಚಾಸಾ 4 ರವರು ಹುಬ್ಬಳ್ಳಿಯಿಂದ ಶಿರಸಿ ಮಾರಿಕಾಂಬ ದೇವಸ್ಥಾನಕ್ಕೆ ದ್ವಿಚಕ್ರ ವಾಹನದ ಮೇಲೆ ಬಂದಿದ್ದು ದೇವರ ದರ್ಶನವನ್ನು ಮುಗಿಸಿ ಶಿರಸಿಯಿಂದ ಮುಂಡಗೋಡ ಮೇಲಾಗಿ ನಾವು ಹುಬ್ಬಳ್ಳಿಗೆ ತೆರಳುತ್ತಿದ್ದೆವು. ಚಾಸಾ4 ರವರು ವಾಹನವನ್ನು ಚಲಾಯಿಸುತ್ತಿದ್ದರು. ನಾನು ಅವರ ಹಿಂದೆ ಕುಳಿತುಕೊಂಡಿದ್ದೆ. ನಾವು ಶಿರಸಿ ಕಡೆಯಿಂದ ಮುಂಡಗೋಡ ಕಡೆಗೆ ಹೋಗುತ್ತಿದ್ದಾಗ ಚೌಡಳ್ಳಿ ಕ್ರಾಸ ಹತ್ತಿರ ವಿರುದ್ಧ ದಿಕ್ಕಿನಿಂದ ಮುಂಡಗೋಡಿಗೆ ಬರುತ್ತಿದ್ದ ವಾಹನ ನಮಗೆ ಬಂದು ಡಿಕ್ಕಿ ಹೊಡೆಯಿತು. ಆರೋಪಿಯು ತಪ್ಪು ದಿಕ್ಕಿನಲ್ಲಿ ಬಂದು ನಮಗೆ ಡಿಕ್ಕಿ ಹೊಡೆದಿರುತ್ತಾರೆ. 1 ನೇ ಆರೋಪಿ ವಾಹನವನ್ನು ಚಲಾಯಿಸುತ್ತಿದ್ದರು. ಎದುರುಗಡೆಯಿಂದ ಬಂದ ವಾಹನದಲ್ಲೂ ಸಹ ಇಬ್ಬರು ಸವಾರರಿದ್ದರು. ಆರೋಪಿ ಎದುರುಗಡೆಯಿಂದ ಬಂದು ಡಿಕ್ಕಿ ಹೊಡೆದ ಕಾರಣ ಅಪಘಾತವಾಗಿದ್ದು, ಚಾಸಾ4 ರವರಿಗೆ ಭಾರಿ ಗಾಯಗಳಾದವು. ಚಾಸಾ4 ರವರಿಗೆ ಮುಖಕ್ಕೆ ಬಾರಿ ಗಾಯವಾಗಿದ್ದು, ಮುಖದಿಂದ ರಕ್ತ ಬರುತ್ತಿತ್ತು. ಅವರ ಕೈ ಮತ್ತು ಕಾಲುಗಳಿಗೆ ಗಾಯವಾಗಿದ್ದು, ರಕ್ತ ಸ್ರಾವ ಆಗುತ್ತಿತ್ತು. ನನ್ನ ಎಡಗಾಲಿನ ಮೊಣಕಾಲಿಗೆ ಗಾಯವಾಗಿತ್ತು. ನಂತರ ತುರ್ತು ಚಿಕಿತ್ಸೆ ವಾಹನಕ್ಕೆ ಕರೆ ಮಾಡಿ ನಮ್ಮನ್ನು ಮುಂಡಗೋಡ ತಾಲ್ಲೂಕ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅಲ್ಲಿಂದ ನಮ್ಮನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕೆರದುಕೊಂಡು ಹೋದರು. ನನ್ನನ್ನು, ಚಾಸಾ4 ರವರನ್ನು ಮತ್ತು 1 ನೇ ಆರೋಪಿಯನ್ನು ಒಂದೇ ತುರ್ತು ಚಿಕಿತ್ಸೆ ವಾಹನದಲ್ಲಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ದಿಃ 27-01-2018 ರಂದು ಸಂಜೆ ಸುಮಾರು 4-15 ರಿಂದ 4-30 ರ ಹೊತ್ತಿಗೆ ನಾನು ಠಾಣೆಗೆ ಬಂದು ದೂರನ್ನು ದಾಖಲಿಸಿರುತ್ತೇನೆ. ಅದೇ ದಿನ ಪೊಲೀಸರಿಗೆ ನಾನು ಘಟನಾ ಸ್ಥಳವನ್ನು ತೋರಿಸಿದ್ದು ಸದರಿ ಸ್ಥಳದಲ್ಲಿ ಪೊಲೀಸರು ಸಂಜೆ 5-00 ಗಂಟೆಯಿಂದ 6-00 ಗಂಟೆಯವರೆಗೆ ಮಹಜರು ಜರುಗಿಸಿದರು. ಅಪಘಾತ ಸ್ಥಳದಲ್ಲಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೆ ಒಳಗಾದ ವಾಹನಗಳು ಇದ್ದವು. ಪಂಚನಾಮೆ ಮಾಡುವ ಕಾಲಕ್ಕೆ ಚಾಸಾ2 ಮತ್ತು 3 ರವರು ಹಾಜರಿದ್ದರು. ಪಂಚನಾಮೆ

ಮಾಡುವ ಕಾಲಕ್ಕೆ ಪೊಲೀಸರು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತಾರೆ. ಸದರಿ ಕಚ್ಚಾ ನಕ್ಷೆ ಸ್ವಲ್ಪ ತಪ್ಪಾಗಿರುತ್ತದೆ. ನಾವು ಶಿರಸಿ ಕಡೆಯಿಂದ ಬರುತ್ತಿದ್ದ ಕಾರಣ ಚೌಡಳ್ಳಿ ಕ್ರಾಸ್ ನಮಗೆ ಎಡಗಡೆಗೆ ಬರುತ್ತಿದ್ದು, ಆರೋಪಿತರಿಗೆ ಬಲಗಡೆಗೆ ಬರುತ್ತಿತ್ತು, ಆದರೆ ಕಚ್ಚಾ ನಕಾಶೆಯಲ್ಲಿ ಅದನ್ನು ತಪ್ಪಾಗಿ ತೋರಿಸಲಾಗಿದೆ. ಸದರಿ ವಿಚಾರವನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ. ಅದನ್ನು ಸರಿ ಮಾಡುವುದಾಗಿ ಪೊಲೀಸರು ನನಗೆ ತಿಳಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ದೂರನ್ನು ನೋಡುತ್ತಿದ್ದು ಅದನ್ನು ಗುರುತಿಸಿರುತ್ತೇನೆ ಅದನ್ನು **ನಿಪಿ.1** ಎಂದು, ಅದರಲ್ಲಿರುವ ಸಹಿ ನನ್ನದೇ ಇದ್ದು, ನನ್ನ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು.ನ್ಯಾಯಾಲಯದ ಮುಂದಿರುವ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಗುರುತಿಸಿರುತ್ತೇನೆ, ಅದನ್ನು **ನಿಪಿ.2** ಎಂದು, ಅದರಲ್ಲಿರುವ ಸಹಿ ನನ್ನದೇ ಇದ್ದು, ನನ್ನ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ಗುರುತಿಸಿರುತ್ತೇನೆ, ಅದನ್ನು **ನಿಪಿ.3** ಎಂದು, ಅದರಲ್ಲಿರುವ ಸಹಿ ನನ್ನದೇ ಇದ್ದು, ನನ್ನ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತೇನೆ. 1 ನೇ ಆರೋಪಿತ ಸದರಿ ದಿನದಂದು ವಾಹನವನ್ನು ಚಲಾಯಿಸುತ್ತಿದ್ದರು.

**ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

-Sd-

ಪ್ರ.ದ.ನ್ಯಾ..ದಂ . ಮುಂಡಗೋಡ.